All India Radio: Bangalore
National Bulletins In Kannada
09.08.2025 : 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*****

ಮುಖ್ಯಾಂಶಗಳು:

- ಆಮದು ಮಾಡಿಕೊಂಡಿದ್ದರೂ ಭಾರತದ ಎಲ್‌ಪಿಜಿ ಬೆಲೆ ವಿಶ್ವದಲ್ಲೇ ಅತ್ಯಂತ ಕಡಿಮೆ - ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ
- ೨೦೨೪-೨೫ನೇ ಹಣಕಾಸು ವರ್ಷದಲ್ಲಿ ೫.೪ ಲಕ್ಷ ಕೋಟಿ ರೂಪಾಯಿಗಳ ಒಟ್ಟು ವ್ಯಾಪಾರ ಮೌಲ್ಯ ದಾಖಲಿಸುವ ಮೂಲಕ ಜೆಮ್ ಮೈಲಿಗಲ್ಲು
- ಇಂದು ದೇಶಾದ್ಯಂತ ರಕ್ಷಾ ಬಂಧನ ಆಚರಣೆ; ಸುರಕ್ಷಿತ - ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ಪ್ರತಿಜ್ಞೆ ಮಾಡುವಂತೆ ನಾಗರಿಕರಿಗೆ ರಾಷ್ಟ್ರಪತಿ ಕರೆ
- ೧೯ ವರ್ಷದೊಳಗಿನವರ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್; ಭಾರತದ ೧೦ ಬಾಕ್ಸರ್‌ಗಳು ಫೈನಲ್‌ಗೆ ಲಗ್ಗೆ

********

ಭಾರತ ಆಮದುದಾರ ರಾಷ್ಟ್ರವಾಗಿದ್ದರೂ ವಿಶ್ವದ ಅತ್ಯಂತ ಅಗ್ಗದ ಬೆಲೆಗೆ ಎಲ್‌ಪಿಜಿ ಮಾರಾಟ ಮಾಡುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್‌ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಕೈಗೆಟುಕುವ ಇಂಧನದಿಂದಾಗಿ ೧೦.೩೩ ಕೋಟಿಗೂ ಹೆಚ್ಚು ಉಜ್ವಲ ಯೋಜನೆ ಪ್ರಯೋಜನ ಪಡೆದಿರುವ ಕುಟುಂಬಗಳು ದಿನಕ್ಕೆ ೬ ರೂಪಾಯಿಗೆ ಆಹಾರವನ್ನು ತಯಾರಿಸಲು ಸಾಧ್ಯವಾಗಿದೆ ಎಂದು ಹೇಳಿದ್ದಾರೆ.ಜಾಗತಿಕ ಅನಿಶ್ಚಿತತೆಯ ನಡುವೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಪಿಜಿ ಬೆಲೆಗಳು ಶೇಕಡ ೬೩ ರಷ್ಟು ಏರಿಕೆಯಾದಾಗಲೂ, ಪ್ರಧಾನಿ ನರೇಂದ್ರ ಮೋದಿಯವರ ನೀತಿಯು ದೇಶವನ್ನು ಬೆಲೆ ಏರಿಕೆಯಿಂದ ರಕ್ಷಿಸಿತು ಮತ್ತು ಯಾವುದೇ ನಕಾರಾತ್ಮಕ ಪರಿಣಾಮ ಬೀರದಂತೆ ನೋಡಿಕೊಂಡಿತು.

ಎಲ್‌ಪಿಜಿ ಬೆಲೆಗಳನ್ನು ಸ್ಥಿರವಾಗಿಟ್ಟಿರುವ ಸಾರ್ವಜನಿಕ ವಲಯದ ತೈಲ ಕಂಪನಿಗಳಿಗೆ ೩೦ ಸಾವಿರ ಕೋಟಿ ರೂಪಾಯಿಗಳನ್ನು ಹನ್ನೆರಡು ಹಂತಗಳಲ್ಲಿ ಪಾವತಿಸಲು ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ನಿರ್ಧರಿಸಿದೆ. ಈ ಪರಿಹಾರವನ್ನು ಮೂರು ಇಂಧನ ವಲಯದ ತೈಲ ಮಾರುಕಟ್ಟೆ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ನಡುವೆ ಹಂಚಲಾಗುತ್ತದೆ ಎಂದು ಸಚಿವರು ತಿಳಿಸಿದರು.

********

೨೦೨೪-೨೫ನೇ ಹಣಕಾಸು ವರ್ಷದಲ್ಲಿ ಸರ್ಕಾರಿ ಡಿಜಿಟಲ್ ಮಾರುಕಟ್ಟೆಯಾದ ಜೆಮ್, ೫.೪ ಲಕ್ಷ ಕೋಟಿ ರೂಪಾಯಿಗಳ ಒಟ್ಟು ವ್ಯಾಪಾರ ಮೌಲ್ಯವನ್ನು ದಾಖಲಿಸುವ ಮೂಲಕ ಗಮನಾರ್ಹ ಮೈಲಿಗಲ್ಲು ಸಾಧಿಸಿದೆ. ನಿನ್ನೆ ನಡೆದ ಜೆಮ್‌ನ ೯ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಜೆಮ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಿಹಿರ್ ಕುಮಾರ್, ಈ ಮೈಲಿಗಲ್ಲು ಆಡಳಿತವನ್ನು ಹೆಚ್ಚು ಪ್ರವೇಶಿಸಬಹುದಾದ, ಒಳಗೊಳ್ಳುವ ಮತ್ತು ಪ್ರಭಾವಶಾಲಿಯನ್ನಾಗಿ ಮಾಡುವ ಜನರ ಆಚರಣೆಯಾಗಿದೆ ಎಂದು ಒತ್ತಿ ಹೇಳಿದರು. ಸಾರ್ವಜನಿಕ ಸಂಗ್ರಹಣೆಯನ್ನು ಹೆಚ್ಚು ಸಮಾನ ಮತ್ತು ಪ್ರವೇಶಿಸಬಹುದಾದ ಪ್ರಕ್ರಿಯೆಯಾಗಿ ಪರಿವರ್ತಿಸುವ ಜೆಮ್‌ನ ಅಚಲ ಬದ್ಧತೆಯನ್ನು ಅವರು ಪುನರುಚ್ಚರಿಸಿದರು. ಸಹೋದರ ಸಹೋದರಿಯರ ನಡುವಿನ ವಿಶೇಷ ಬಾಂಧವ್ಯದ ಹಬ್ಬವಾದ ರಕ್ಷಾ ಬಂಧನವನ್ನು ಇಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ, ಸಹೋದರಿಯರು ತಮ್ಮ ಸಹೋದರರಿಗೆ ರಾಖಿಯನ್ನು ಕಟ್ಟಿ, ಅವರ ಸಮೃದ್ಧಿ, ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಪ್ರಾರ್ಥಿಸುತ್ತಾರೆ. ಪ್ರತಿಯಾಗಿ, ಸಹೋದರರು ತಮ್ಮ ಸಹೋದರಿಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡುತ್ತಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ರಕ್ಷಾ ಬಂಧನದ ಸಂದರ್ಭದಲ್ಲಿ ನಾಗರಿಕರಿಗೆ ಶುಭಾಶಯ ಕೋರಿದ್ದಾರೆ. ರಕ್ಷಾ ಬಂಧನದ ಪವಿತ್ರ ಹಬ್ಬವು ಸಹೋದರ ಸಹೋದರಿಯರ ನಡುವಿನ ಪ್ರೀತಿ ಮತ್ತು ವಿಶ್ವಾಸದ ವಿಶಿಷ್ಟ ಬಂಧವನ್ನು ಸೂಚಿಸುತ್ತದೆ ಎಂದು ತಮ್ಮ ಸಂದೇಶದಲ್ಲಿ ಶ್ಲಾಘಿಸಿದ್ದಾರೆ. ಈ ಹಬ್ಬವು ಸಮಾಜದಲ್ಲಿ ಸಾಮರಸ್ಯ ಮತ್ತು ಏಕತೆಯ ಮನೋಭಾವವನ್ನು ಉತ್ತೇಜಿಸುತ್ತದೆ, ಈ ಸಂದರ್ಭವು ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನೈತಿಕ ಮೌಲ್ಯಗಳನ್ನು ಸಂರಕ್ಷಿಸಲು ಒಂದು ಅವಕಾಶವಾಗಿದೆ ಮತ್ತು ಇದು ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಮತ್ತು ಅವರನ್ನು ಗೌರವಿಸುವ ಪ್ರತಿಯೊಬ್ಬರ ದೃಢಸಂಕಲ್ಪವನ್ನು ಬಲಪಡಿಸುತ್ತದೆ.

ಪ್ರತಿಯೊಬ್ಬ ಮಹಿಳೆಯೂ ಸುರಕ್ಷಿತ ಎಂದು ಭಾವಿಸುವ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡಬಹುದಾದ ಸಮೃದ್ಧ ದೇಶವನ್ನು ನಿರ್ಮಿಸಲು ಜನರು ಪ್ರತಿಜ್ಞೆ ಮಾಡಬೇಕೆಂದು ರಾಷ್ಟ್ರಪತಿ ಕರೆ ನೀಡಿದ್ದಾರೆ

********

ಪ್ರಧಾನಿ ನರೇಂದ್ರ ಮೋದಿಯವರ ಆಕಾಶವಾಣಿಯ ಮನ್ ಕಿ ಬಾತ್ ಕಾರ್ಯಕ್ರಮ ಆರಂಭವಾದಾಗಿನಿಂದ ೩೪ ಕೋಟಿ ರೂಪಾಯಿಗಳಿಗೂ ಹೆಚ್ಚು ಆದಾಯವನ್ನು ಗಳಿಸಿದೆ. ರಾಜ್ಯಸಭೆಯಲ್ಲಿ ನಿನ್ನೆ ಲಿಖಿತ ಉತ್ತರದಲ್ಲಿ ಮಾಹಿತಿ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್. ಮುರುಗನ್ ಈ ವಿಷಯ ತಿಳಿಸಿದರು. ಈ ಮಾಸಿಕ ರೇಡಿಯೋ ಸಂಚಿಕೆಗಳ ಮೂಲಕ, ಶಿಕ್ಷಣ, ಆರೋಗ್ಯ, ಪರಿಸರ, ನಾವೀನ್ಯತೆ ಮತ್ತು ಸಾಮಾಜಿಕ ಸೇವೆಯಂತಹ ಕ್ಷೇತ್ರಗಳಲ್ಲಿ ಭಾರತೀಯರು ಪರಿಣಾಮಕಾರಿ ಕೆಲಸ ಮಾಡುತ್ತಿರುವ ಸ್ಪೂರ್ತಿದಾಯಕ ಕಥೆಗಳನ್ನು ಪ್ರಧಾನಿ ಹಂಚಿಕೊಳ್ಳುತ್ತಾರೆ. ಆಕಾಶವಾಣಿ ಪ್ರಸಾರ ಮಾಡುವ ಈ ಕಾರ್ಯಕ್ರಮವನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೇಳುಗರು ಆಲಿಸಿ, ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಈ ಕಾರ್ಯಕ್ರಮ ದೂರದರ್ಶನ ನ್ಯಾಷನಲ್ ಮತ್ತು ಪ್ರಾದೇಶಿಕ ಭಾಷಾ ವಾಹಿನಿಗಳಲ್ಲೂ ಪ್ರಸಾರವಾಗುತ್ತದೆ. ಯೂಟ್ಯೂಬ್ ಮತ್ತು ಇತರ ಒಟಿಟಿಯಂತಹ ಡಿಜಿಟಲ್ ವೇದಿಕೆಗಳಲ್ಲೂ ಶ್ರೋತೃಗಳ ತೊಡಗಿಸಿಕೊಳ್ಳುವಿಕೆ ಗಮನಾರ್ಹವಾಗಿ ವಿಸ್ತರಿಸಿದೆ ಎಂದು ಸಚಿವರು ರಾಜ್ಯಸಭೆಗೆ ತಿಳಿಸಿದರು. ಮನ್ ಕಿ ಬಾತ್, ರಾಷ್ಟ್ರ ನಿರ್ಮಾಣದಲ್ಲಿ ತಳಮಟ್ಟದ ಸಾಧಕರನ್ನು ಪ್ರದರ್ಶಿಸುವ ಮತ್ತು ನಾಗರಿಕರ ಭಾಗವಹಿಸುವಿಕೆಯನ್ನು ಪ್ರೇರೇಪಿಸುವ ರಾಷ್ಟ್ರೀಯ ವೇದಿಕೆಯಾಗಿ ಮುಂದುವರೆದಿದೆ ಎಂದು ಸಚಿವ ಎಲ್. ಮುರುಗನ್ ಮಾಹಿತಿ ನೀಡಿದರು.

********

ದೇಶಾದ್ಯಂತ ಟೊಮೆಟೊ ಚಿಲ್ಲರೆ ಬೆಲೆಗಳು ಏರಿಕೆಯಾಗಿರುವುದು ತಾತ್ಕಾಲಿಕ ಸ್ಥಳೀಯ ಅಂಶಗಳಿಂದಾಗಿಯೇ ಹೊರತು ಮೂಲಭೂತ ಬೇಡಿಕೆ-ಪೂರೈಕೆ ಅಸಮತೋಲನ ಅಥವಾ ಉತ್ಪಾದನಾ ಕೊರತೆಯಿಂದಾಗಿ ಅಲ್ಲ, ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಜುಲೈ ಕೊನೆಯ ವಾರದಿಂದ ದೇಶದ ಉತ್ತರ ಮತ್ತು ವಾಯುವ್ಯ ಪ್ರದೇಶಗಳಲ್ಲಿ ಭಾರಿ ಮಳೆಯಿಂದಾಗಿ ದೆಹಲಿಯಲ್ಲಿ ಟೊಮೆಟೊ ಬೆಲೆಗಳು ಪ್ರತಿ ಕಿಲೋಗ್ರಾಂಗೆ ೭೩ ರೂಪಾಯಿಗಳಿಗೆ ಏರಿದೆ ಎಂದು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ ತಿಳಿಸಿದೆ. ಈ ಹವಾಮಾನ ಸಂಬಂಧಿತ ಅಡಚಣೆಯಿಂದಾಗಿ ಜುಲೈ ಅಂತ್ಯದ ವೇಳೆಗೆ ಬೆಲೆಗಳು ಪ್ರತಿ ಕಿಲೋಗ್ರಾಂಗೆ ೮೫ ರೂಪಾಯಿಗಳಿಗೆ ಏರಿವೆ. ಚೆನ್ನೈ ಮತ್ತು ಮುಂಬೈನಂತಹ ಪ್ರಮುಖ ನಗರಗಳು ಇದೇ ರೀತಿಯ ಬೆಲೆ ಏರಿಕೆಯನ್ನು ಕಂಡಿಲ್ಲ. ಚೆನ್ನೈನಲ್ಲಿ ಟೊಮೆಟೊ ಬೆಲೆ ಪ್ರತಿ ಕಿಲೋಗ್ರಾಂಗೆ ೫೦ ರೂಪಾಯಿಗಳಷ್ಟಿದ್ದರೆ, ಮುಂಬೈನಲ್ಲಿ ೫೮ ರೂಪಾಯಿಗಳಷ್ಟಿದೆ. ಪ್ರಸ್ತುತ, ಅಖಿಲ ಭಾರತ ಟೊಮೆಟೊದ ಸರಾಸರಿ ಚಿಲ್ಲರೆ ಬೆಲೆ ಕೆಜಿಗೆ ೫೨ ರೂಪಾಯಿಗಳಾಗಿದ್ದು, ಇದು ಕಳೆದ ವರ್ಷ ಕೆಜಿಗೆ ೫೪ ರೂಪಾಯಿಗಳಿಗಿಂತ ಕಡಿಮೆಯಾಗಿದೆ. ಹಿಂದಿನ ವರ್ಷಕ್ಕಿಂತ ಹೆಚ್ಚಿನ ಈರುಳ್ಳಿ ಮತ್ತು ಆಲೂಗಡ್ಡೆ ಉತ್ಪಾದನೆಯು ಸಾಕಷ್ಟು ಪೂರೈಕೆಯನ್ನು ಖಚಿತಪಡಿಸಿದೆ, ಜೊತೆಗೆ ಸರ್ಕಾರಿ ನಿರಂತರ ಬೆಲೆ ಸ್ಥಿರತೆಯನ್ನು ಖಾತ್ರಿಪಡಿಸಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

********

ಏಷ್ಯಾದ ಅತಿದೊಡ್ಡ, ೪.೫ ಕಿ.ಮೀ ಉದ್ದದ ಸರಕು ರೈಲು 'ರುದ್ರಸ್ತ್ರ'ದ ಪ್ರಾಯೋಗಿಕ ಸಂಚಾರವನ್ನು ಯಶಸ್ವಿಯಾಗಿ ನಡೆಸುವ ಮೂಲಕ ಭಾರತೀಯ ರೈಲ್ವೆ ಹೊಸ ಮೈಲಿಗಲ್ಲು ಸಾಧಿಸಿದೆ. ಉತ್ತರ ಪ್ರದೇಶದ ಚಂದೌಲಿಯಲ್ಲಿರುವ ಗಂಜ್‌ಖ್ವಾಜಾ ರೈಲು ನಿಲ್ದಾಣದಿಂದ ಜಾರ್ಖಂಡ್‌ನ ಗರ್ವಾವರೆಗೆ ಗಂಟೆಗೆ ಸರಾಸರಿ ೪೦.೫೦ ಕಿ.ಮೀ ವೇಗದಲ್ಲಿ ೫ ಗಂಟೆ ೧೦ ನಿಮಿಷಗಳಲ್ಲಿ ೨೦೯ ಕಿ.ಮೀ ದೂರವನ್ನು ಕ್ರಮಿಸಲಾಯಿತು. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಉದಯ್ ಸಿಂಗ್ ಮೀನಾ, ಈಗ ಪೂರ್ವ ಮಧ್ಯ ರೈಲ್ವೆಯ ಪಂಡಿತ್ ದೀನದಯಾಳ್ ಉಪಾಧ್ಯಾಯ ವಿಭಾಗದಿಂದ ಧನಬಾದ್ ವಿಭಾಗಕ್ಕೆ ಸರಕುಗಳ ತ್ವರಿತ ಸಾಗಣೆಗಾಗಿ ಸರಕು ರೈಲುಗಳನ್ನು ಕಳುಹಿಸಲಾಗುವುದು ಎಂದು ಹೇಳಿದರು. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಪ್ರಾಯೋಗಿಕ ಸಂಚಾರದ ವೀಡಿಯೊವನ್ನು ಹಂಚಿಕೊಂಡಿದ್ದು, ರುದ್ರಾಸ್ತ್ರ, ಸಂಪನ್ಮೂಲಗಳನ್ನು ಮಾತ್ರವಲ್ಲದೆ ಸಮಯವನ್ನು ಸಹ ಉಳಿಸುತ್ತದೆ. ಮೂರು ದೀರ್ಘ ಸಾಗಣೆ ರ್‍ಯಾಕ್‌ಗಳನ್ನು ಸೇರಿಸುವ ಮೂಲಕ ರುದ್ರಾಸ್ತ್ರವನ್ನು ಸಿದ್ಧಪಡಿಸಲಾಗಿದೆ ಎಂದು ಉದಯ್ ಸಿಂಗ್ ಮೀನಾ ಹೇಳಿದರು.

********

ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ೧೯ ವರ್ಷದೊಳಗಿನವರ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ೭ ಮಹಿಳಾ ಹಾಗೂ ೩ ಪುರುಷ ಬಾಕ್ಸರ್‌ಗಳು ಸೇರಿದಂತೆ ಒಟ್ಟು ೧೦ ಭಾರತೀಯ ಬಾಕ್ಸರ್‌ಗಳು ಫೈನಲ್ ಪ್ರವೇಶಿಸಿದ್ದು, ಚಿನ್ನದ ಪದಕಕ್ಕಾಗಿ ತಮ್ಮ ಮುಂದಿನ ಪಂದ್ಯಗಳಲ್ಲಿ ಸೆಣಸಾಟ ನಡೆಸಲಿದ್ದಾರೆ. ನಿನ್ನೆ ನಡೆದ ಸೆಮಿಫೈನಲ್ ಪಂದ್ಯಗಳಲ್ಲಿ ಮಹಿಳಾ ಬಾಕ್ಸರ್‌ಗಳಾದ ನಿಶಾ, ಮುಸ್ಕಾನ್, ವಿನಿ, ನಿಶಾ, ಆರ್ತಿ ಕುಮಾರಿ, ಪಾರ್ಚಿ ತೊಕಾಸ್ ಹಾಗೂ ಪುರುಷ ಬಾಕ್ಸರ್‌ಗಳಾದ ಮೌಸಮ್ ಸುಹಾಗ್, ರಾಹುಲ್ ಕುಂಡು ಮತ್ತು ಹೇಮಂತ್ ಸಾಂಗ್ವಾನ್ ತಮ್ಮ ತಮ್ಮ ವಿಭಾಗದ ಪಂದ್ಯಗಳಲ್ಲಿ ಗೆಲುವು ಸಾಧಿಸಿ, ಫೈನಲ್ ಪ್ರವೇಶಿಸಿದರೆ, ೯ ಕೆಜಿ ವಿಭಾಗದಲ್ಲಿ ಭಾರತದ ಕೃತಿಕಾ ಫೈನಲ್‌ಗೆ ನೇರ ಪ್ರವೇಶ ಪಡೆದಿದ್ದಾರೆ.

********

ಭಾರತೀಯ ಹವಾಮಾನ ಇಲಾಖೆ ಇಂದು ಅರುಣಾಚಲ ಪ್ರದೇಶದ ಕೆಲವು ಭಾಗಗಳಲ್ಲಿ ಭಾರೀ ಮಳೆಯಾಗುವ ಮುನ್ಸೂಚನೆ ನೀಡಿದೆ. ಆಂಧ್ರಪ್ರದೇಶ, ಬಿಹಾರ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಧ್ಯಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ, ಕಾರೈಕಲ್, ತೆಲಂಗಾಣ, ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಈಶಾನ್ಯ ಪ್ರದೇಶದ ಸ್ಥಳಗಳಲ್ಲಿ ಮುಂದಿನ ೨-೩ ದಿನಗಳಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದೆ. ಪಶ್ಚಿಮ ಬಂಗಾಳ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಪ್ರತ್ಯೇಕ ಸ್ಥಳಗಳಲ್ಲಿ ಇಂದು ಮಿಂಚು ಮತ್ತು ಬಿರುಗಾಳಿಯೊಂದಿಗೆ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ನೀಡಿದೆ. ಈ ಪ್ರದೇಶಗಳಲ್ಲಿನ ಹವಾಮಾನ ಪರಿಸ್ಥಿತಿಗಳು ಈ ತಿಂಗಳ ೧೪ ರವರೆಗೆ ಹಾಗೆಯೇ ಉಳಿಯುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

********

ಇದೇ ೧೫ರಂದು  ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಭೇಟಿ ಮಾಡುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣದಲ್ಲಿ ದೃಢಪಡಿಸಿರುವ ಅವರು, ಅಲಾಸ್ಕಾದಲ್ಲಿ ರಷ್ಯಾ ಅಧ್ಯಕ್ಷರೊಂದಿಗೆ ಉಕ್ರೇನ್ ಯುದ್ಧ ಕೊನೆಗಾಣಿಸುವ ಬಗ್ಗೆ ಮಾತುಕತೆ ನಡೆಸಲಿದ್ದಾರೆ.

ವಿವಿಧ ಜಾಗತಿಕ ಬಿಕ್ಕಟ್ಟುಗಳ ಪರಿಹಾರದ ಭಾಗವಾಗಿ ಅರ್ಮೇನಿಯಾ ಮತ್ತು ಅಜರ್‌ಬೈಜಾನ್ ನಡುವೆ ಶಾಂತಿ ಒಪ್ಪಂದ ಅನಾವರಣಗೊಳಿಸಿದ ಕೆಲವೇ ಗಂಟೆಗಳಲ್ಲಿ ಅಧ್ಯಕ್ಷ ಟ್ರಂಪ್, ರಷ್ಯಾ ಅಧ್ಯಕ್ಷರೊಂದಿಗೆ ಸಭೆ ಕುರಿತು ಘೋಷಿಸಿದ್ದಾರೆ. ಅಲಾಸ್ಕಾದಲ್ಲಿ  ಈ ಸಭೆ ನಡೆದಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಈ ದಶಕದಲ್ಲೇ ಕೈಗೊಳ್ಳುತ್ತಿರುವ ಮೊದಲ ಅಮೆರಿಕ ಭೇಟಿ ಇದಾಗಿರಲಿದೆ. ಕಳೆದ ಬಾರಿ ೨೦೧೫ರ ಸೆಪ್ಟೆಂಬರ್‌ನಲ್ಲಿ ಅಂದಿನ ಅಧ್ಯಕ್ಷ ಬರಾಕ್ ಒಬಾಮಾ ಅವರೊಂದಿಗೆ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳಲು ರಷ್ಯಾ ಅಧ್ಯಕ್ಷರು ಅಮೆರಿಕಕ್ಕೆ ಭೇಟಿ ನೀಡಿದ್ದರು.

*****END****